ಶ್ರೀ ವೀರಯ್ಯಸ್ವಾಮಿ.— ಮಾನ್ಯ ಮಂತ್ರಿಗಳು ೧೨ಬಸ್ಸುಗಳ ಸರಾಸರಿ ಆದಾಯ ಕೇವಲ ೬೦೦ ರೂಪಾಯಿ ಎಂದು ಹೇಳಿದ್ದಾರೆ. ಹಾಗೂ ಸದರಿ ಮಾರ್ಗದಲ್ಲಿ ಸಂಚರಿಸುತ್ತಿರುವ ೬ಬಸ್ಸುಗಳಿಗೆ ನಾಲ್ಕು ಚಾಲಕರಿಗೆ ಖಾಯಂ ಆಗಿ ನೇಮಿಸಲಾಗಿದೆ ಎಂದೂ ಹೇಳಿದ್ದಾರೆ. ಚಾಲಕರು ಶಾಮೂಲಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಈ ರೀತಿ ಜೊಂದರೆಯಾಗುತ್ತಿದೆ ಎಂಬುದು ನಿರ್ದಿಷ್ಟವಾಗಿ ತಿಳಿದು ಬಂದಿದೆ. ಇದೇ ಮಾರ್ಗದಲ್ಲಿ ೧೫–೨೦ ಖಾಸಗಿ ಬಸ್ಸುಗಳು ಲಾಭದಾಯಕವಾಗಿ ನಡೆಯುತ್ತಿದೆ. ಆದರೆ ಅಲ್ಲಿ ಹಳೇ ಬಸ್ಸುಗಳನ್ನು ಹಾಕುತ್ತಿರುವುದರಿಂದ ಜನ ಅದಕ್ಕೆ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಅನೇಕ ಕಡೆಗಳಲ್ಲಿ ಖಾಸಗಿ ಬಸ್ ಮಾಲೀಕರ ಜೊತೆಯಲ್ಲಿ ಡಿಪೋ ಮ್ಯಾನೇಜರ್ ಇರಬಹುದು, ಕಂಡಕ್ಟರುಗಳಿರಬಹುದು ಅಥವಾ ಚಾಲಕರಿರಬಹುದು ಒಂದಾಗಿ ಈ ರೀತಿ ಮಾಡುತ್ತಿರುವುದು ನಿಜ. ಆದರೆ ನಿರ್ದಿಷ್ಟವಾದ ದೂರುಗಳು ನನಗೆ ಬಂದಿಲ್ಲ ಎಂದು ಹೇಳಿದ್ದೇನೆಯೇ ಹೊರತು ಅವರು ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ. ಬಹಳಷ್ಟು ಕಡೆ ಈ ರೀತಿಯ ದೂರುಗಳನ್ನು ನಾನು ಕೇಳಿದ್ದೇನೆ. ಮತ್ತು ಸಾರಿಗೆ ಸಂಸ್ಥೆ ನಷ್ಟವಾಗುವುದಕ್ಕೆ ಇದೇ ಕಾರಣ ಎಂಬುದು ಗೊತ್ತು. ಆದ್ದರಿಂದ ಮಾನ್ಯ ಸದಸ್ಯರು ಸಹಕಾರ ಕೊಟ್ಟರೆ ಇಂಥವರು ಈ ರೀತಿ ಮಾಡುತ್ತಿದ್ದಾರೆ ಎಂದು ದೂರುಗಳನ್ನು ನಿರ್ದಿಷ್ಟವಾಗಿ ಕೊಟ್ಟರೆ ನಾನು ಓಡಿಪೋಗಳ ರೆವ್ಯೂ ಮಾಡುವಾಗ ಈ ರೀತಿ ಆಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನಪಡಂತ್ತೇನೆ.

ಶ್ರೀ ವೀರಯ್ಯಸ್ವಾಮಿ.— ಚಾಲಕರನ್ನು ರೊಟೇಷನ್ ಪ್ರಕಾರ ಹಾಕಿದರೆ ಇದನ್ನು ತಪ್ಪಿಸಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ತಕ್ಷಣ ಅದನ್ನು ಮಾಡಿಸುತ್ತೇನೆ.

Breaching of Millaghatta Tank in Shimoga City.

649. SRI K. H. SRINIVASA (Shimoga).— Will the minister for Urban Development and Law and parlimentary Affair be pleased to state.—

a) whether there was a decision of Government during 1978–79 to breach the Millaghatta Tank in Shimoga City, to acquire the achkat and hand over the Tank bed and the achkat to the Shimoga City Municipality for formation of sites. (copy of the G.O., may kindly be furnished)

b) the reasons for not implementing the decision so far

c) whether the Government is aware that the said proposal is pending since a long time

d) whether the Government would take immediate steps for breaching the tank

SRI A. LAKSHMI SAGAR.— Minister for Urban Development.

a) Government in their order No. PWD 16 MSP 79 dt. 3-4-79 has ordered for breaching of Millaghatta Tank and to hand over to City Municipal Council, Shimoga for formation of Sites, free of cost.

b) The Municipality was advised bythe Public Works & Electricity Department Authorities to acquire the lands coming under the achkat of the tank to avoid litigation like payment of crop compensation, etc., to the land owners. The Municipality could not acquire the lands for want of funds.

c) Yes, for want of funds by City Municipal Council, Shimoga.

d) This could be decided after the question of acquiring the achkat lands is resolved.

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ೧೯೭೯ರಲ್ಲಿ ಈ ಕೆರೆಯನ್ನು ಒಡೆದು ಇದರ ಭಾಗವನ್ನು ನಗರಸಭೆಗೆ ಪಹಿಸಿಕೊಡಬೇಕೆಂದು ಆಜ್ಞೆಯನ್ನು ಮಾಡಿದ್ದರೂ ಕೂಡಾ ಕೆರೆ ಕೆಳಗೆ ಬರುವಂಥ ಅಚ್ಚುಕಟ್ಟುದಾರರು ಬಂದು ಲೋಕೋಪಯೋಗಿ ಇಲಾಖೆಯಲ್ಲಿ ಸಾಕಷ್ಟು ಪ್ರಭಾವ ಬೀರಿ ಆ ಆಜ್ಞೆ ಕಾರ್ಯಗತ ಆಗದ ರೀತಿಯಲ್ಲಿ ಮಾಡಿದ್ದಾರೆ. ಆ ಕೆರೆಯನ್ನು ಒಡೆದು ಮುನಿಸಿಪಾಲಿಟಿಗೆ ಕೊಡಿ ಎಂದು ಸರ್ಕಾರಿ ಆಜ್ಞೆ ಇದೆ. ಇದರ ಕೆಳಗೆ ಇರತಕ್ಕ ಅಚ್ಚುಕಟ್ಟುದಾರರಿಗೆ ಬೇರೆ ನೀರನ್ನು ಕೂಡಾ ಒದಗಿಸಲಾಗುತ್ತಿದೆ, ಅವರು ಈ ಕೆರೆಯ ನೀರನ್ನೇನೂ ಅವಲಂಬಿಸಿಲ್ಲ. ಅದನ್ನು ಆಕ್ವೈರ್ ಮಾಡುವುದಂ ಅಥವಾ ಬಿಡುವುದು ಬೇರೆ ಪ್ರಶ್ನೆ. ಈ ಕೆರೆ ಹೆಚ್ಚುಕಡಿಮೆ ಊರಿನ ಮಧ್ಯೆ ಇರುವುದರಿಂದ ಇದನ್ನು ಒಡೆಯಂಥ ವಿಷಯ ಸುಹಾರಾಜರ ಕಾಲದಿಂದಲೂ ಇರುತ್ತದೆ. ಆದ್ದರಿಂದ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ? ಎರಡನೆಯದಾಗಿ, ಅಚ್ಚುಕಟ್ಟನ್ನು ಆಕ್ವೈರ್ ಮಾಡಬೇಕೆಂದರೆ ಎಷ್ಟು ಹಣ ಬೇಕಾಗುತ್ತದೆ ? ಈ ಬಗ್ಗೆ ಯಾವುದಾದರೂ ಒಂದು ರೂಪದಲ್ಲಿ ಸರ್ಕಾರ ಸಾಲದ ವ್ಯವಸ್ಥೆ ಮಾಡುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್,—ಮೊದಲನೆಯದಾಗಿ ಸರ್ಕಾರ ಸಾಲವನ್ನು ಒದಗಿಸುವ ಪ್ರಶ್ನೆ ಇದೆ. ಇವತ್ತು ಇದನ್ನು ಮುನಿಸಿಪಾಲಿಟಿಗೆ ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ಅದನ್ನು ಆಕ್ವೈರ್ ಮಾಡಬೇಕಾದರೆ ಹಣವನ್ನು ಮುನಿಸಿಪಾಲಿಟಿಯವರು ಕೊಡಬೇಕೆಂದು ತಿಳಿಸಲಾಗಿದೆ. ಮೊದಲನೆಯದಾಗಿ ಮುನಿಸಿಪಾಲಿಟಿಯವರು ಹಣ ಕೊಡುವುದಕ್ಕೆ ನಮಗೆ ಶಕ್ತಿ ಇಲ್ಲ ಎಂದು ಪತ್ರವನ್ನು ಬರೆದಿದ್ದರಂ. ನಂತರ ಹುಡ್ಕೋ ನೆರವಿನಿಂದ ಸಹಾಯ ಪಡೆದುಕೊಂಡು ಕೆಲಸ ಮಾಡಿ ಎಂದಿದ್ದಕ್ಕೆ ಅದಕ್ಕೂ ಆಗುವುದಿಲ್ಲವೆಂದು ಹೇಳಿದ್ದಾರೆ. ಪರಿಸ್ಥಿತಿ ಹೀಗೆ ಇರುವಾಗ ಯಾವ ರೂಪದಲ್ಲಿ ಸಹಾಯ ಕೊಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರೇ ಹೇಳಬೇಕು. ಈಗ ಶಿವಮೊಗ್ಗ ನಗರಸಭೆ ಒಂದು ಕೋಟಿ ರೂಪಾಯಿ ಬಾಕಿ ವಸೂಲಿ ಮಾಡಬೇಕಾದ್ದನ್ನೇ ಬಿಟ್ಟಿದೆ, ಅದನ್ನು ಮಾಡಿಲ್ಲ. ಆದುದರಿಂದ ಇನ್ನು ಯಾವುದೇ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ಆಗುತ್ತದೆಂದು ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ನಾನು ವಿಚಾರಿಸುತ್ತೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.- ಅಧ್ಯಕ್ಷರೇ, ಕೆರೆಯನ್ನು ಒಡೆಯುವುದಕ್ಕೂ ಹಾಗೂ ಅಚ್‌ಕಟ್‌ನ್ನು ಆಕ್ವೈರ್ ಮಾಡುವುದಕ್ಕೂ ನೇರ ಸಂಬಂಧ ಇಲ್ಲ, ಇವತ್ತು ಆರೋಗ್ಯದ ದೃಷ್ಟಿಯಿಂದ ಆ ಕೆರೆಯನ್ನು ಒಡೆದುಹಾಕಬೇಕಾದುದು ಅತ್ಯಗತ್ಯವಿದೆ. ಆ ಬಗ್ಗೆ ಸರ್ಕಾರಕ್ಕೆ ಅಧಿಕಾರ ಇದೆ. ಅಚ್ಚುಕಟ್ಟಿನ ಪ್ರಶ್ನೆ ಹಾಕದೇ ಕೆರೆಯನ್ನು ತಕ್ಷಣ ಒಡೆಯಬೇಕೆಂದು ೧೯೭೯ರಲ್ಲಿಯೇ ತೀರ್ಮಾನ ಆಗಿದೆ. ಮಂತ್ರಿಮಂಡಲದ ತೀರ್ಮಾನ ಆಗಿ ಸರ್ಕಾರಿ ಆಜ್ಞೆ ಕೂಡಾ ಆಗಿದೆ. ಆದ್ದರಿಂದ ಇನ್ನೂ ಕೂಡ ಕಾರ್ಯಗತ ಮಾಡದಿದ್ದರಿಂದ ಇದನ್ನು ಆದಷ್ಟು ಬೇಗ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರಿ ಆಜ್ಞೆ ಹೊರಟಿದ್ದು ನಿಜ. ಆದರೆ ಯಾರೋ ಒಬ್ಬರು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್‌ಹಾಕಿ ಸರ್ಕಾರಿ ಆಜ್ಞೆಯನ್ನು ರದ್ದುಪಡಿಸಿದ ವಿಚಾರ ಸನ್ಮಾನ್ಯ ಸದಸ್ಯರಿಗೆ ಗೊತ್ತಿದೆಯೆಂದಂ ನಾನು ತಿಳಿದುಕೊಂಡಿದ್ದೇನೆ. ಇವತ್ತು ಕೆರೆ ಅಂಗಳವನ್ನು ತೆಗೆದುಕೊಳ್ಳಬೇಕಾದರೆ ಕಾಂಪೆನ್‌ಸೇಷನ್ ಕೊಡುವುದು ಇದೆ. ಹಾಗೂ ಅಚ್ಚುಕಟ್ಟುದಾರರಿಗೆ ನೀರು ಹೋಗುವ ಪ್ರಶ್ನೆ ಇದೆ. ಆದ್ದರಿಂದ ಈ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕಂ. ಹಾಗೂ ಮುನಿಸಿಪಾಲಿಟಿಯವರು ತಮ್ಮಲ್ಲಿ ಹಣ ಇಲ್ಲ ಎಂದು ಹೇಳುತಿ ದ್ದಾರೆ. ಹಣ ಬರುವುದಂ ಒಂದೇ ಒಂದು ನಿಚಿತವಾದರೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಹೈಕೋರ್ಟಿನಲ್ಲಿ ಯಾರೋ ಪ್ರಶ್ನೆ ಮಾಡಿದ್ದು ನಿಜ.ಆ ಕೆರೆಯನ್ನು ಒಡೆದುಹಾಕಿ ಮುನಿಸಿಪಾಲಿಟಿಗೆ ಹ್ಯಾಂಡ್ ಓವರ್ ಮಾಡಬೇಕೆನ್ನುವುದು ಸರ್ಕಾರದ ಆಜ್ಞೆ ಇದೆ. ಈ ರೀತಿ ಆಜ್ಞೆ ಮಾಡಬೇಕೆಂದು ಮಂತ್ರಿ ಮಂಡಲ ಪರಿಶೀಲನೆ ಮಾಡಿ ಈ ರೀತಿ ಮಾಡಿದ ಮೇಲೆ, ಸರ್ಕಾರಿ ವಕೀಲರು ಸರ್ಕಾರಕ್ಕೆ ಹೇಳದೇ ಕೇಳದೇ ಈ ರೀತಿ ಮಾಡುವುದಕ್ಕೆ ಅಧಿಕಾರ ಇಲ್ಲ ಇದು ನಮ್ಮ ಕಾಲದಲ್ಲಿ ಆಗಿದ್ದಲ್ಲ. ಆಗ ಆಗಿದ್ದರೆ ಅದರ ಪ್ರಶ್ನೆಯೇ ಬೇರೆ ಇತ್ತು.ಇದರಿಂದ ಈ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಯಾವ ರೀತಿಯಲ್ಲಿ ನೋಡಿದರೂ ಜಮೀನು ತೆಗೆದುಕೊಳ್ಳುವುದಕ್ಕೆ ಹಣ ಖಚಿತವಾಗಿ ಸಿಗುತ್ತದೆಂದು ಹೇಳುವವರೆವಿಗೂ ಇದರ ಮುಂದಿನ ಪ್ರಶ್ನೆ ಏಳುವುದಿಲ್ಲ. ಈಗಿನ ಪರಿಸ್ಥಿತಿ ಪ್ರಕಾರ ಅಚ್ಚುಕಟ್ಟುದಾರರಿಗೆ ಕಾಂಪೆನ್‌ಸೇಷನ್ ಕೋಡದೇ ಹೋದರೆ ಮುಂದೆ ಹೋಗುವ ಹಾಗೆ ಕಾಣುವುದಿಲ್ಲ,

ಶಿಕಾರಿಪುರ ಕೈಗಾರಿಕಾ ವಸಾಹತಿಯಲ್ಲಿ ೫೫ ಶೆಡ್ಡುಗಳ ನಿರ್ಮಾಣದ ಬಗ್ಗೆ

೩೪೪. ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಣ್ಣ ಪ್ರಮಾಣದ ಕೈಗಾರಿಕೆಗಳ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕ್ ತಡಗಣಿ ಹತ್ತಿರವಿರುವ ಕೈಗಾರಿಕಾ ಕ್ಷೇತ್ರದಲ್ಲಿ ನಿರ್ಮಿಸಿದ ೫೫ ಶೆಡ್ಡುಗಳ ಪೈಕಿ ಎಷ್ಟು ಶೆಡ್ಡುಗಳಲ್ಲಿ ಔದ್ಯೋಗಿಕ ಚಟುವಟಿಕೆಗಳು ನಡೆಯುತ್ತಿವೆ ;

ಆ) ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ ಈ ಶೆಡ್ಡುಗಳನ್ನು ಸರ್ಕಾರವು ಸ್ವಂತ ಔದ್ಯೋಗಿಕ ಉಪಯೋಗಕ್ಕಾಗಿ ಉಪಯೋಗಿಸುವುದು ಸಾಧ್ಯ ಇಲ್ಲವೇ.

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

ಅ) ಶಿಕಾರಿಪುರ, ತಡಗಣಿ ಹಳ್ಳಿಯಲ್ಲಿ ೬ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಲಾಗಿದೆ ಅವುಗಳ ಪೈಕಿ ಎರಡು 'ಸಿ' ಟೈಪ್ ಶೆಡ್ಡುಗಳನ್ನು ಉದ್ಯೋಗಕ್ಕಾಗಿ ವಿತರಣೆ ಮಾಡಲಾಗಿದೆ ಆದರೆ ಅವುಗಳಲ್ಲಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಈಗಾಗಲೇ ಉಳಿದ ೪ 'ಡಿ' ಟೈಪ್ ಶೆಡ್ಡುಗಳನ್ನು ಶ್ರೀ ಅಕ್ಕಮಹಾದೇವಿ ವಿದ್ಯಾಪೀಠ ಶಿರಾಳಕೊಪ್ಪ ಹೆಣ್ಣುಮಕ್ಕಳ ಔದ್ಯೋಗಿಕ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಕೊಡಲಾಗಿದೆ.

ಆ) ಕಟ್ಟಿಸಿದ ಎಲ್ಲಾ ಶೆಡ್ಡುಗಳನ್ನು ಈಗಾಗಲೇ ವಿತರಣೆ ಮಾಡಿರುವುದರಿಂದ ಸರ್ಕಾರವು ಅವುಗಳನ್ನು ಸ್ವಂತ ಉಪಯೋಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ. ಅಧ್ಯಕ್ಷರೇ, ಹತ್ತಾರು ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿದ ಶೆಡ್‌ಗಳು ೧೫–೨೦ ವರ್ಷಗಳಿಂದ ಖಾಲಿ ಇವೆ. ಅದನ್ನು ಉಪಯೋಗ ಮಾಡುವುದು ಸರ್ಕಾರದ ಕರ್ತವ್ಯ ಇದ್ದು ಆ ಬಗ್ಗೆ ಗಮನ ಕೊಟ್ಟಿಲ್ಲ. ಎರಡನೆಯದಾಗಿ ಯಾರಿಗೆ ಇವನ್ನು ಕೊಟ್ಟಿದ್ದಾರೆ ಅವರು ಪೊಸೆಷನ್‌ಗೆ ತೆಗೆದುಕೊಂಡಿಲ್ಲ. ಹಾಗೂ ಅಲ್ಲಿ ಔದ್ಯೋಗಿಕ ತರಬೇತಿ ಕೇಂದ್ರ ಪ್ರಾರಂಭಿಸಲು ಶ್ರೀ ಅಕ್ಕಮಹಾದೇವಿ ವಿದ್ಯಾಪೀಠದವರು ಮುಂದೆ ಬಂದಿದ್ದು ನೀವು ನಿಶ್ಚಯ ಮಾಡಿರುವ ಬೆಲೆ ದುಬಾರಿಯಾಗಿದ್ದು ಅವರು ಅದರಿಂದ ನಡೆಸಲು ಆಗುವುದಿಲ್ಲವೆಂದು ಹೇಳಿದ್ದಾರೆ. ಅವರಿಗೆ ಉಪಯೋಗ ಆಗುವ ದೃಷ್ಟಿಯಿಂದ ಈಗಲೂ ನಾಮಿನಲ್ ರೇಟ್ ಫಿಕ್ಸ್ ಮಾಡಿ ಈ ವಿದ್ಯಾ ಸಂಸ್ಥೆಯವರು ಅದನ್ನು ಉಪಯೋಗಿಸುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಈ ಬಗ್ಗೆ ಆದಷ್ಟು ಬೇಗ ನಿರ್ಣಯ ಮಾಡಬೇಕು. ಇಲ್ಲದಿದ್ದರೆ ಈ ಕಟ್ಟಡಗಳು ಬಿದ್ದುಹೋಗುತ್ತವೆ. ಯಾವುದಾದರೂ ರೂಪದಲ್ಲಿ ಇದು ಆಗಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ನಾವು ಶೆಡ್‌ಗಳನ್ನು ಅಲಾಟ್ ಮಾಡಿ ನಾಲ್ಕೈದು ಬಾರಿ ನೋಟಿಫಿಕೇಷನ್ ಮಾಡಿದ್ದೇವೆ. ಆದರೆ ಯಾರೂ ಮುಂದೆ ಬರುತ್ತಾ ಇಲ್ಲ. ಈಗಾಗಲೇ ಔದ್ಯೋಗಿಕ ತರಬೇತಿ ಕೇಂದ್ರದ ಬಗ್ಗೆ ನಾವು ಅಲಾಟ್ ಮಾಡಿದ್ದು ಅವರು ಕೆಲವು ರೀತಿಯ ಕನ್‌ಸೆಷನ್ಸ್